ದಿಃ 26.11.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿ ಸವಾಲುಃ ಶ್ರೀ ಎಂ.ಬಿ.ಎಸ್., 1 ನೇ ಆರೋಪಿ ಪರ ವಕೀಲರಿಂದಃ

4. ಚಾ.ಸಾ-11 ರವರು ನನಗೆ ಹಾಗು ಚಾ.ಸಾ-6 ರವರಿಗೆ 1 ನೇ ಆರೋಪಿಯನ್ನು ಪತ್ತೆ ಮಾಡುವ ಬಗ್ಗೆ ಮೌಖಿಕವಾಗಿ ಆದೇಶ ಮಾಡಿದ್ದರು. ಚಾ.ಸಾ-11 ರವರು ನನಗೆ 1 ನೇ ಆರೋಪಿಯ ಭಾವಚಿತ್ರವಾಗಲಿ ಅಥವಾ ರೇಖಾಚಿತ್ರವಾಗಲಿ ನೀಡಿರಲಿಲ್ಲ. ವಿ.ಎಸ್.ಗಾರ್ಡನ್ ಬಳಿ ಇರುವ ಅಂಬೇಡ್ಕರ್ ಭವನವು ನಮ್ಮ ಠಾಣೆಯ ಎಷ್ಟನೇ ಬೀಟ್ ಗೆ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಆ ದಿನ ಅದೇ ಬೀಟ್ ನ ಕರ್ತವ್ಯದಲ್ಲಿದ್ದ ಮಿಕ್ಕ ನಮ್ಮ ಠಾಣಾ ಸಿಬ್ಬಂದಿಯವರು ನನಗೆ 1 ನೇ ಆರೋಪಿ ಬಗ್ಗೆ ಯಾವುದೇ ಮಾಹಿತಿ ಕೊಟ್ಟಿರಲಿಲ್ಲ. 1 ನೇ ಆರೋಪಿಯನ್ನು ಹಿಡಿದುಕೊಂಡ ಸ್ಥಳದಲ್ಲಿ ನಾವು ಬೇರೆ ಯಾವುದೇ ಸಾರ್ವಜನಿಕರ ಹೇಳಿಕೆ ಪಡೆದಿಲ್ಲ ಮತ್ತು ಆ ಬಗ್ಗೆ ಯಾವುದೇ ಸ್ಥಳ ಮಹಜರ್ ಮಾಡಿಲ್ಲ.

5. ನಾನು ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ದಿಃ 3.9.2020 ರಂದು ಚಾ.ಸಾ-6 ರವರ ಜೊತೆಯಲ್ಲಿ ವಿ.ಎಸ್.ಗಾರ್ಡನ್ ನಲ್ಲಿರುವ ಅಂಬೇಡ್ಕರ್ ಭವನದ ಬಳಿ ಸಂಜೆ 6 ಗಂಟೆಗೆ ಹೋಗಿ 1 ನೇ ಆರೋಪಿಯನ್ನು ಬಂಧಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ಮನೆಯಿಂದ ಕರೆತಂದು ಈ ಸುಳ್ಳು ಪ್ರಕರಣದಲ್ಲಿ ಸಿಕ್ಕಿಸಿದ್ದೇವೆ ಎಂದರೆ ಸರಿಯಲ್ಲ. ಚಾ.ಸಾ-11 ರವರು ಸೃಷ್ಟಿಸಿಕೊಂಡ ನಿ.ಪಿ-4 ರ ವರದಿಯ ಮೇರೆಗೆ ನಾನು ಇಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಎಂ. ಚಂದ್ರಶೇಖರ್ ರೆಡ್ಡಿ )
ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.